ಮೊದಲಿನಿಂದಲೂ ಬರವಣಿಗೆಯಲ್ಲಿ ಏನೋ ಒಂದು ಹೊಸತನವಿರಬೇಕು ಅನ್ನುವುದು ನನ್ನ ಹಂಬಲ. ಅದರ ವಸ್ತು, ಭಾಷೆ, ಶೈಲಿ ಎಲ್ಲವೂ ಭಿನ್ನವಾಗಿರಬೇಕು ಅನ್ನುವ ತುಡಿತ ಇದ್ದೇ ಇದೆ. ಆದ್ದರಿಂದಲೇ ಕತೆ, ಅಂಕಣ, ಕವಿತೆ ಏನೇ ಬರೆದರೂ ಅದನ್ನು ಭಿನ್ನವಾಗಿಯೇ ಬರೆಯಲು ಯತ್ನಿಸುತ್ತೇನೆ. ಜೊತೆಗೆ ಬರವಣಿಗೆ ಎಲ್ಲವನ್ನೂ ಸ್ಪಷ್ಟವಾಗಿ ಅರ್ಥವಾಗುವಂತೆ ಹೇಳಿಬಿಡಬಾರದು. ಅದರಲ್ಲೊಂದು 'ಕಾಡುವಿಕೆ'ಯ ಅಂಶ ಇರಬೇಕು. ಅದು ಬರೆದವರಿಗೂ ಕಾಡಬೇಕು, ಓದುಗರಿಗೂ ಕಾಡಬೇಕು. ಅರ್ಥಕ್ಕೆ ಮೀರಿದ ಏನೋ ಒಂದು ಓದುಗರ ಮನಸನ್ನು ಆಳದಲ್ಲಿ 'ಮೀಟಬೇಕು'.

ಜರ್ನಲಿಸ್ಟ್. ಆಕೆ ಇಸ್ಲಾಮಿಕ್ ದೇಶಗಳಲ್ಲಿ ಮಾರುವೇಷದಲ್ಲಿ ಓಡಾಡಿ ಅಲ್ಲಿನ ಹೆಣ್ಣುಮಕ್ಕಳ ಬದುಕು ಹಾಗೂ ತನ್ನ ಅನುಭವಗಳನ್ನ ಅದರಲ್ಲಿ ಬರೆದಿದಾರೆ. ಅದನ್ನ ಲಂಕೇಶ್ ಓದಲು ಕೊಟ್ಟು ನನಗೆ ಇಷ್ಟವಾಗುವ ಭಾಗಗಳನ್ನು ಅನುವಾದಿಸಿ ಕೊಡಲು ಹೇಳಿದರು. ಅನುವಾದಿಸಿದ ಭಾಗಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು.

ಜಪಾನಿ ಲೇಖಕಿ ಬರೆದ 'ದ ಪಿಲ್ಲೋ ಬುಕ್' ಓದಿದಾಗ ಇಷ್ಟವಾಯಿತು. ಅದನ್ನು ಅಬ್ದುಲ್ ರಶೀದ್ 'ಕೆಂಡಸಂಪಿಗೆ'ಯಲ್ಲಿ ಸರಣಿಯಾಗಿ ಪ್ರಕಟ ಮಾಡಿದರು. ಅದಾದ ಮೇಲೆ 'ಕೆಂಡಸಂಪಿಗೆ'ಗೆ ಅಂತ ಮಾರ್ಕ್ವೆಜ್ ಸಂದರ್ಶನ, ಒಂದಷ್ಟು ಬೇರೆ ಭಾಷೆಯ ಕವಿತೆಗಳನ್ನು ಅನುವಾದ ಮಾಡಿಕೊಟ್ಟೆ.

◆ ರಾಕಿ ಪರ್ವತಗಳ ನಡುವೆ ಕ್ಯಾಬರೆ... ಮುಂತಾದ ಪ್ರವಾಸ ಟಿಪ್ಪಣಿಗಳು...

ಪ್ರವಾಸ ಅಂದರೆ ಮೊದಲಿನಿಂದಲೂ ಬಹಳ ಇಷ್ಟ. ನನಗೆ, ನನ್ನ ಗಂಡನಿಗೆ ತುಂಬ ಪ್ರವಾಸದ ಹುಚ್ಚು. ನಾವು ಅವಕಾಶ ಸಿಕ್ಕಾಗೆಲ್ಲ ಸುತ್ತಾಡುತ್ತಿದ್ದೆವು. ವೀಕೆಂಡುಗಳಲ್ಲಿ ಅಲ್ಲೇ ಗುಜರಾತ್, ಮಹಾರಾಷ್ಟ್ರ ಅಂತ ಸುತ್ತುತ್ತಿದ್ದೆವು. ಪ್ರತಿ ವರ್ಷವೂ ಒಂದೆರೆಡು ದೊಡ್ಡ ಪ್ರವಾಸ, ಒಂದಷ್ಟು ಚಿಕ್ಕ ಚಿಕ್ಕ ಪ್ರವಾಸ ಹೋಗುತ್ತಾ ಇದ್ದೆವು. ಪ್ರವಾಸ ಮಾಡಿದಾಗ ಸಿಗೋ ಅನುಭವಗಳಿವೆಯಲ್ಲ ಅವು ಅದ್ಭುತ. ನಾವೆಂದೂ ಪ್ಯಾಕೇಜ್ ಟೂರ್ ತೊಗೊಳೋಲ್ಲ. ಸ್ವಲ್ಪ ಕಷ್ಟವಾದರೂ ಪರವಾಗಿಲ್ಲ. ನಾವೇ ಹೋಗಿ ಸುತ್ತಾಡಿ ಬರೋದು. ಪ್ರವಾಸ ಕೂಡ ನನ್ನ ಬರವಣಿಗೆಗೆ ಬಹಳ ಸಹಾಯ ಮಾಡಿದೆ.

ಹೀಗೆ ಸುತ್ತಾಡಿಬಂದ ಜಾಗಗಳ ಬಗ್ಗೆ 'ಲಂಕೇಶ್ ಪತ್ರಿಕೆ', 'ಉದಯವಾಣಿ' ಮೊದಲಾದ ಪತ್ರಿಕೆಗಳಿಗೆ ಲೇಖನ ಬರೆದಿದ್ದೆ. 'ರಾಕೀ ಪರ್ವತಗಳ ನಡುವೆ ಕ್ಯಾಬರೆ' ಮೊದಲು ಪುಸ್ತಕವಾಗಿ ಪ್ರಕಟಗೊಂಡ ಪ್ರವಾಸಕಥನ.

ಕೆನಡಾದ ಬ್ರಿಟಿಷ್ ಕೊಲಂಬಿಯಾ ವಿವಿಯ ಕ್ರಿಯೇಟಿವ್ ರೈಟಿಂಗ್ ವಿಭಾಗದಲ್ಲಿ ಮೂರು ತಿಂಗಳು ಅಧ್ಯಯನ ಮಾಡಲು ಫೆಲೋಶಿಪ್ ಸಿಕ್ಕಿತು. ಆ ಫೆಲೋಶಿಪ್‌ಗೆ ಅರ್ಜಿ ಹಾಕು ಅಂತ ನನ್ನ ಸ್ನೇಹಿತೆ ಹೇಳಿದಾಗ ಅದು ಸಿಗಬಹುದು ಅನ್ನೋ ನಂಬಿಕೆ ಇರಲಿಲ್ಲ. ಆಯ್ಕೆ ಪ್ರಕ್ರಿಯೆಗೆ ಸುಮಾರು ಒಂದು ವರ್ಷ ಸಮಯ ತೊಗೊಂಡಿದ್ದರು. ಸುಮಾರು ಒಂದು ವರ್ಷ ಅವರು ನನ್ನ ಬರವಣಿಗೆ ಮತ್ತಿತರ ವಿವರಗಳನ್ನು ಕಳಿಸಲು ಕೇಳುತ್ತಲೇ ಇದ್ದರು. ಕಡೆಗೆ ಒಂದು ರಾತ್ರಿ ಆ ಫೆಲೋಶಿಪ್‌ಗೆ ಆಯ್ಕೆ ಆಗಿದಿನಿ ಅಂತ ಫೋನ್ ಬಂದಾಗ ನಂಬಲಿಕ್ಕಾಗಲಿಲ್ಲ. ಹೀಗೆ ಅಲ್ಲಿಗೆ ಹೋಗೋ ಅವಕಾಶ ಸಿಕ್ಕಿತು. ಒಬ್ಬಳೇ ದೇಶ ಸುತ್ತುವ, ಒಬ್ಬಳೇ ಇರೋ ಅವಕಾಶ ಸಿಕ್ಕಿದ್ದು ಅದೇ ಮೊದಲು. ಅಲ್ಲಿಗೆ ಹೋಗಿ